**<u>3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,ರವರ</u>**

**<u>ನ್ಯಾಯಾಲಯ, ಕಡೂರು</u>**

**ಸಿ.ಸಿ.ನಂ.542/2019**

**ದಿನಾಂಕಃ22-01-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

ಪಿ.ಡಬ್ಲ್ಯುಃ2 ಸಿ.ಡಬ್ಲ್ಯುಃ3

ಸಾಕ್ಷಿಯ ಹೆಸರು ಃ ಬಸಪ್ಪ
ತಂದೆಯ ಹೆಸರು ಃ ಹನುಮಂತಪ್ಪ
ವಯಸ್ಸು ಃ 47 ವರ್ಷ
ಉದ್ಯೋಗ ಃ ವ್ಯವಸಾಯ
ವಾಸ ಃ ಜೋಡಿತಿಮ್ಮಾಪುರ

**<u>ಮುಖ್ಯ ವಿಚಾರಣೆಃ ಮಾನ್ಯ ಹಿಸಸಅ ಅವರಿಂದಃ</u>**

ಸುಮಾರು 2 ವರ್ಷಗಳ ಹಿಂದೆ ಸಂಜೆ 6.00 ಗಂಟೆ ಸಮಯದಲ್ಲಿ ನಾನು ನನ್ನ ಅಂಗಡಿಯ ಬಳಿ ಇದ್ದೆನು. ಆಗ ಜೋಡಿತಿಮ್ಮಾಪುರ ಗೇಟ್ ನ ಬಳಿ ಇರುವ ರೈಲ್ವೆ ಗೇಟ್ ಹತ್ತಿರ ಶಬ್ದಕೇಳಿ ನಾನು ಸ್ಥಳಕ್ಕೆ ಹೋಗಿ ನೋಡಿದೆನು ಆಗ ಕಂತರಾಜು ಎಂಬುವವರಿಗೆ ತಮಿಳುನಾಡಿನ ಲಾರಿ ಡಿಕ್ಕಿಪಡಿಸಿದ್ದು ಕಾಂತರಾಜು ಎಂಬುವವರು ಜಜ್ಜಿಹೋಗಿದ್ದರು. ಲಾರಿ ಹೋಗುವಾಗ ಕಾಂತರಾಜು ಅಡ್ಡಬಂದು ಅಪಘಾತ ಸಂಬವಿಸಿದೆ ಎಂದು ತಿಳಿದಿರುತ್ತದೆ. ನಂತರ ಆಂಬುಲೆನ್ಸ್ ನಲ್ಲಿ ಕಾಂತರಾಜುರವರನ್ನು ಬೀರೂರು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿದ್ದು ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗುವಾಗಿ ಭದ್ರಾವತಿಯ ಹತ್ತಿರ ಮಾರ್ಗಮದ್ಯದಲ್ಲಿ ಕಾಂತರಾಜು ಮೃತಪಟ್ಟಿರುವುದಾಗಿ ತಿಳಿದುಬಂದಿರುತ್ತದೆ ನಂತರ ಅದೇ ವಾಹನದಲ್ಲಿ ಮೃತ ಕಾಂತರಾಜುರವನ್ನು ಬೀರೂರು ಆಸ್ಪತ್ರೆಗೆ ಕರೆದುಕೊಂಡು ಬಂದು ಶವಪರೀಕ್ಕೆ ಮಾಡಿಸಿರುತ್ತಾರೆ. ಸದರಿ ಅಪಘಾತದ ಬಗ್ಗೆ ಮೃತ ಕಾಂತರಾಜುರವರ ಸಂಬಂಧಿ ಚಾಸಾ-1 ರವರು ದೂರು ನೀಡಿರುತ್ತಾರೆ. ಸದರಿ ಅಪಘಾತದ ಬಗ್ಗೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಪೊಟೋದಲ್ಲಿರುವ ಅಪಘಾತ ಪಡಿಸಿದ ಲಾರಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ

ಪೊಟೋವನ್ನು ನಿಪಿ-2 ಎಂದು ಗುರುತಿಸಲಾಯಿತು. ಸದರಿ ಲಾರಿ ಚಾಲಕನನ್ನು ಆ ದಿನ ನಾನು ನೋಡಿರುವುದಿಲ್ಲ. ಆರೋಪಿಯನ್ನು ನಾನು ಆ ದಿನ ನೋಡಿರುವುದಿಲ್ಲ. **(ಈ ಹಂತದಲ್ಲಿ ಸಾಕ್ಷಿಯನ್ನು ಬಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ರವರು ಅನುಮತಿ ಕೋರಿದ್ದು ಸಾಕ್ಷಿಯ ಹೇಳಿಕೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು. )**

**<u>ಪಾಟೀ ಸವಾಲುಃ ಮಾನ್ಯ ಹಿಸಸಅ ಅವರಿಂದಃ</u>**

ಪೊಲೀಸರ ಮುಂದೆ ಹೇಳಿದ ಹೇಳಿಕೆಯಲ್ಲಿ ಮೃತ ಕಾಂತರಾಜು ರಸ್ತೆಯ ಎಡಭಾಗದಲ್ಲಿ ಜೋಡಿತಿಮ್ಮಾಪುರದಿಂದ ಬೀರೂರು ಕಡೆಗೆ ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಬರುತ್ತಿರುವಾಗ ಟಿಎನ್-34-ಕ್ಯೂ-6710 ನಂಬರ್ ನ 10 ಚಕ್ರದ ಲಾರಿಯನ್ನು ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಅಪಘಾತಪಡಿಸಿರುವುದಾಗಿ ಹೇಳಿಕೆ ನೀಡಿದ್ದೇನೆಂದರೆ ಸರಿ. ಸದರಿ ಲಾರಿ ಚಾಲಕ ತಮಿಳುನಾಡಿನ ರಮೇಶ್ ಎಂದು ತಿಳಿಸಿದ್ದೇನೆಂದರೆ ಸರಿಯಲ್ಲ.ಆ ದಿನ ನಾನು ರಮೇಶ್ ರವನ್ನು ನೋಡಿದ್ದು ಆತ ನ್ಯಾಯಾಲಯದ ಮುಂದೆ ಹಾಜರಿದ್ದರು ಸಹ ಆತನನ್ನು ನೋಡಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಯನ್ನು ನಿರಾಕರಿಸಿರುವ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ವೈ.ಟಿ.ಎಂ ವಕೀಲರಿಂದಃ</u>**

ಚಾಸಾ-1,2,4 ಮತ್ತು 5 ರವರು ಒಂದೇ ಊರಿನವರು ಮತ್ತು ಸಂಬಂದಿಗಳೆಂದರೆ ಸರಿ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿ. ಅಪಘಾತವನ್ನು ನಾನು ನೋಡಿಲ್ಲ ಎಂದರೆ ಸರಿ. ಅಪಘಾತ ಸ್ಥಳದಿಂದ ರೈಲ್ವೆ ಗೇಟ್ 200 ಅಡಿ ದೂರವಿದೆ ಎಂದರೆ ಸರಿ. ಅಪಘಾತ ಸ್ಥಳದಿಂದ ರೈಲ್ವೆ ಗೇಟ್ ಗೆ ನೇರವಾದ ರಸ್ತೆ ಇದೆ ಎಂದರೆ ಸರಿ. ರೈಲ್ವೆ ಗೇಟ್ ಬಳಿ ರಸ್ತೆಗೆ ಹಂಪುಗಳನ್ನು

ಹಾಕಲಾಗಿದೆ ಎಂದರೆ ಸರಿ. ಹಂಪುಗಳು ಇರುವ ಕಾರಣ ಸದರಿ ರಸ್ತೆಯಲ್ಲಿ ವಾಹನಗಳು ವೇಗವಾಗಿ ಹೋಗುವುದಿಲ್ಲ ಎಂದರೆ ಸರಿ. ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
III ನೇ.ಹೆ.ದಿ.ನ್ಯಾ.&ಪ್ರಃದಃನ್ಯಾಃದಂ.,ರವರು,
ಕಡೂರು.